ಕರ್ನಾಟಕ ವಿಧಾನ ಸಭೆ

571 ಶ್ರೀ ನರೇಂದ್ರ ಬಾಬು ನೆ.ಲ (ಮಹಾಲಕ್ಷ್ಮಿ ಲೇಔಟ್)

ಮಾನ್ಯ ಮುಖ್ಯಮಂತ್ರಿಗಳು

ಅ) ಬಂಡೀಪುರ ಅರಣ್ಯದಲ್ಲಿ ರಸ್ತೆ ಅಗಲೀಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

– ಇಲ್ಲ –

ಆ) ಹಾಗಿದ್ದಲ್ಲಿ, ಎಷ್ಟು ವಿಸ್ತೀರ್ಣದ ರಸ್ತೆ ಅಗಲೀಕರಣ ಮಾಡಲಾಗುವುದು; (ವಿವರ ನೀಡುವುದು);

– ಅನ್ವಯಿಸುವುದಿಲ್ಲ –

ಇ) ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ರೈಲ್ವೆ ಮಾರ್ಗ ನಿರ್ಮಾಣದ ಪ್ರಸ್ತಾಪ ಕರ್ನಾಟಕ ಅಥವಾ ತಮಿಳುನಾಡು ಸರ್ಕಾರದಿಂದ ಕೇಂದ್ರ ಸರ್ಕಾರದ ಮುಂದಿದೆಯೇ;

– ಇಲ್ಲ –

ಈ) ಇದರಿಂದಾಗಿ ವನ್ಯಜೀವಿಗಳಿಗೆ ತೊಂದರೆ ಆಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

– ಅನ್ವಯಿಸುವುದಿಲ್ಲ –

ಕರ್ನಾಟಕ ವಿಧಾನ ಸಭೆ

13ನೇ ವಿಧಾನಸಭೆ

3ನೇ ಅಧಿವೇಶನ

575 ಶ್ರೀ ಜಯಚಂದ್ರ ಟಿ.ಬಿ. (ಶಿರಾ)

ಮಾನ್ಯ ಲೋಕೋಪಯೋಗಿ ಸಚಿವರು

ಅ) ಲೋಕೋಪಯೋಗಿ ಇಲಾಖೆಯಲ್ಲಿ ಕೇಶಿಪ್ ಸಂಸ್ಥೆಯಡಿಯಲ್ಲಿ 2ನೇ ಹಂತದ ಯೋಜನೆಗೆ ವಿವಿಧ ನೆರವುಗಳನ್ನೊಳಗೊಂಡ ಫಂಡಿಂಗ್ ಸ್ಟ್ರಕ್ಚರ್ ಬಗ್ಗೆ ಮಾಹಿತಿ ಒದಗಿಸುವುದು; ಮಂಜೂರಾದ ಕಾಮಗಾರಿಗಳು ಯಾವುವು ಹಾಗೂ ಪ್ರಿಯಾರಿಟಿ ಮಾಡುವಲ್ಲಿ ಅನುಸರಿಸಲಾಗಿರುವ ಮಾನದಂಡಗಳೇನು; ಪ್ರಿಯಾರಿಟಿ ಪಟ್ಟಿಯನ್ನು ಒದಗಿಸುವುದು;

ಕೆಶಿಪ್–2 ರ ಯೋಜನೆಯಡಿ ರಸ್ತೆಗಳ ಅಭಿವೃದ್ಧಿಗೆ, ಭಾರಿ ಮೊತ್ತದ ಆರ್ಥಿಕ ಬೇಡಿಕೆಯ ಪೂರೈಕೆಗಾಗಿ ಸರ್ಕಾರವು ವಿವಿಧ ವಿತ್ತೀಯ ಸಂಸ್ಥೆಗಳ ಆಯ್ಕೆಗಳಾದ ವಿಶ್ವ ಬ್ಯಾಂಕ್, ಏಷಿಯನ್ ಅಭಿವೃದ್ಧಿ ಬ್ಯಾಂಕ್‌ಗಳ ಬಾಹ್ಯ ನೆರವು, ದೇಶಿಯ ವಿತ್ತ ಸಂಸ್ಥೆಗಳಿಂದ ಸಾಲ ಮತ್ತು ಖಾಸಗಿ ಸಹಭಾಗಿತ್ವ ಮುಂತಾದವುಗಳ ಸಾಧ್ಯತೆಯನ್ನು ಪರಿಶೀಲಿಸುತ್ತಿದೆ. ಇದರಲ್ಲಿ ವಿಶ್ವ ಬ್ಯಾಂಕ್ 300 ಮಿಲಿಯನ್ ಯು.ಎಸ್.ಡಾಲರ್ (ರೂ. 1500 ಕೋಟಿ) ಗಳ ಸಾಲದ ನೆರವು ನೀಡಲು ತಾತ್ವಿಕವಾಗಿ ಒಪ್ಪಿದೆ. ಕೆಶಿಪ್–2 ಅಡಿಯಲ್ಲಿ ರಸ್ತೆಗಳನ್ನು ವಿಶ್ವ